ಬದಲಾಯಿಸಿದ್ದಕ್ಕಾಗಲೀ, ಸಮುದ್ರ ಮೇಲೇರಿ ಬಂದುದಕ್ಕಾಗಲೀ, ಅಥವಾ ಯಾವುದೋ ಅನ್ಯಗ್ರಹದವರನ್ನು ನಾವು ಸಂಪರ್ಕಿಸ ಹೊರಟು ಅವರು ದಂಡೆತ್ತಿ ಬಂದು ಇಲ್ಲಿಯದನ್ನೆಲ್ಲ ನಿರ್ನಾಮ ಮಾಡಲಿ – ಎಲ್ಲದಕ್ಕೂ ಮನುಷ್ಯನೇ ತಾನೆ ಹೊಣೆ? ಹೀಗಾಗಿ, ವಿಕಾಸವಾದದ ಅಡಿಯಲ್ಲಿ ಸಮ್ಮತವಾದ ಅಳಿವಿಗೂ ಹಾಗೂ ನಾವು ಊಹಿಸುತ್ತಿರುವ ಈ ಮುಂದಿನ ಲಯಕ್ಕೂ ವ್ಯತ್ಯಾಸವಿದೆ.

ಈ ಬಾರಿಯ ಧ್ವಂಸದಲ್ಲಿ ಎಲ್ಲಾ ಜೀವ ಸಂಕುಲಗಳೂ ಅಳಿಯುತ್ತವೆಯೋ ಅಥವಾ ಮನುಷ್ಯ ಮಾತ್ರ ನಾಶವಾಗಿ ಹೋಗುತ್ತಾನೋ? ಮನುಷ್ಯನ ದಾಹದ ಈ ಪರಾಕಾಷ್ಠೆ ನೋಡಿದರೆ ಆತ ತನ್ನ ಸುತ್ತಲಿನದನ್ನೆಲ್ಲ ನುಂಗಿ ತೇಗಬಲ್ಲ ಸಾಮರ್ಥ್ಯ ಉಳ್ಳವನೇ ಆಗಿದ್ದಾನೆ ಎಂಬುದು ನಿಜವಾದರೂ, ಪ್ರಕೃತಿಗೆ ಮನುಷ್ಯನನ್ನು ಕಾಲಾಂತರದಲ್ಲಿ ಅಥವಾ ಕ್ಷಣಮಾತ್ರದಲ್ಲಿ ಹೊಸಕಿ ಹಾಕುವ ಶಕ್ತಿಯಿದೆ ಎಂಬುದನ್ನು ನಾವು ಕಡೆಗಣಿಸುವಂತಿಲ್ಲ. ಹಾಗೂ ಈ ಹಿಂದೆ ತನ್ನಳಿವಿನ ಅಂತಿಮ ಹಂತದ ಪ್ರಶ್ನೆ ಬಂದಾಗ ಅದು ಮೈ ಕೊಡವಿ ನಿಂತ ನಿದರ್ಶನಗಳಿವೆ. ಇನ್ನೂರು ಮಿಲಿಯನ್ ವರ್ಷಗಳ ಹಿಂದೆ ಜೀವಿತವಿದ್ದ ಡೈನೋಸರ್‌ಗಳು ಈ ಭೂಮಿಯ ಮೇಲಿನ ಸಸ್ಯಕೋಟಿಯನ್ನೆಲ್ಲ ತಿಂದು ಮುಗಿಸಬಹುದಾದ ಅಪಾಯ ಎದುರಾದಾಗ, ಪ್ರಕೃತಿಯೇ ಆ ದೈತ್ಯದೇಹಿ ಪ್ರಾಣಿಗಳನ್ನು ಒಂದೇ ಏಟಿಗೆ ನಾಶಪಡಿಸುವ ಘಟನೆಯನ್ನು ಆಗಗೊಡಿಸಿತ್ತು. ಈಗ ಮಾನವನ ಸರದಿ. ಆದರೆ, ಈ ಬಾರಿ ಪ್ರಕೃತಿಯೇನೂ ಮಾಡಬೇಕಿಲ್ಲ. ಸಹಾಯಕ್ಕೆ ಯಂತ್ರಗಳು ಬಂದಾವು. ಮನುಷ್ಯನೇ ಸಂಶೋಧಿಸಿದ, ಬುದ್ಧಿವಂತ, ಭಾವ–ಜೀವಗಳನ್ನು ಮೈದುಂಬಿಕೊಂಡ ಯಂತ್ರಗಳೇ ಮನುಕುಲದ ಪತನಕ್ಕೆ ಕಾರಣವಾಗಬಹುದು. ಮನುಷ್ಯನೇ ಇಲ್ಲವೆಂದಾದ ಮೇಲೆ ಉಳಿದಾವುದಕ್ಕೂ ಅಪಾಯವೇ ಇಲ್ಲವಲ್ಲ? ಅದರ ನಂತರ ಈ ಭೂಮಿ ಕೆಲವೇ ವರ್ಷಗಳಲ್ಲಿ ಮಾನವಪೂರ್ವ ಖಂಡವಾಗಿ ಬದಲಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಆದರೆ ಪ್ರಶ್ನೆಯಿರುವುದು – ತನ್ನ ಸುತ್ತಲಿನದೆಲ್ಲ ಮೊದಲು ನಾಶಮಾಡಿಯೇ ಅದರೊಟ್ಟಿಗೇ ತಾನೂ ನಶಿಸುತ್ತಾನೋ ಈ ಮಾನವ, ಅಥವಾ...

★★★

ಕುಮಟೆಯ ನಿಲ್ದಾಣದಲ್ಲಿ ಒಬ್ಬನೇ ಮಾತನಾಡುತ್ತಾ ಓಡಾಡುತ್ತಿರುವ ವ್ಯಕ್ತಿಯಿಂದ ಶುರುಗೊಂಡು ಇಷ್ಟೆಲ್ಲಾ ಹೇಳಿದುದಕ್ಕೆ ಕಾರಣವಿದೆ. ನಾವು ಹೋಗಬೇಕಾದ ಸ್ಥಳದ ಬಸ್ಸು ಹತ್ತಿ ಕುಳಿತು, ಅದಿನ್ನೇನು ಹೊರಡಬೇಕು ಎನ್ನುತ್ತಿರುವಾಗ ಆ ವ್ಯಕ್ತಿ ಬಸ್ಸಿನತ್ತಲೇ ಓಡಿ ಬಂದ. ಡ್ರೈವರನ ಹತ್ತಿರ, 'ಈ ಬಸ್ಸು ಅಮೆರಿಕಕ್ಕೆ ಹೋಗ್ತದಾ?...' ಎಂದು ಕೇಳಿದ. ಆತ ಓಡಿ ಬಂದ ರೀತಿ, ಪ್ರಶ್ನಿಸುವಾಗಿನ ಆಂಗಿಕ, ಮುಖಚರ್ಯೆ ಎಲ್ಲವನ್ನು ಗಮನಿಸಿದ ನನಗೆ ಆತನೋರ್ವ ಮತಿಭ್ರಮಣೆಯಾದ ವ್ಯಕ್ತಿ ಎಂದು ಅರಿವಾಯಿತು. ಆತ ಇದುವರೆಗೂ ದೂರವಾಣಿಯಲ್ಲಿ ಸಂಭಾಷಣೆ ನಡೆಸುತ್ತ ಅಂದುಕೊಂಡುದನ್ನು ನೆನೆದು ಕರುಳು ಚುರುಕ್ ಎಂದಿತು.

ಸರಿಯಿರುವವನು ಮರುಳನಂತೆ ಕಾಣುವ, ಮರುಳನು ಸರಿಯಿರುವಂತೆ ತೋರುವ ಈ ರೂಪಾಂತರದ ನಡುವೆ; ಸರಿ ಯಾರು, ಮಳ್ಳರಾರು ಹಾಗೂ ಈ ಸ್ಥಿತ್ಯಂತರಕ್ಕೆ ಕಾರಣವೇನು? ರೂಪು ಪಡೆದುಕೊಂಡ ಪಂಚತಂತ್ರ ಕಥೆಯ ಹುಲಿ ಜೀವಕ್ಷಣಕ್ಕೆ ಕಾಯುವ ಪ್ರಕ್ರಿಯೆಯ ಯಾವ ಹಂತದಲ್ಲಿ ನಾವಿದ್ದೇವೆ ಎಂದು ನಾನು ಯೋಚಿಸುತ್ತಿರುವಂತೆ–

'ಚಂದ್ರಲೋಕಕ್ಕೆ ಹೋಗ್ತದೆ. ಬೇಕಾದ್ರೆ ಹತ್ಕಳಿ' ಎಂದು ಬಸ್ಸಿನ ಚಾಲಕ ಆ ವ್ಯಕ್ತಿಗೆ ಅಪಹಾಸ್ಯದಿಂದ ಉತ್ತರಿಸಿ, ಭುರ್ರನೆ ಬಸ್ಸನ್ನು ಮುಂದಕ್ಕೊಯ್ದ. ಕಿಟಕಿಯಿಂದ ಬಗ್ಗಿ ಅವನನ್ನು ಮತ್ತೊಮ್ಮೆ ನೋಡಲು ಯತ್ನಿಸಿದೆ ನಾನು. ಬಸ್ಸು ದೂರ ಸಾಗುತ್ತಿರುವಂತೆ ಸಣ್ಣ ಸಣ್ಣವನಾಗುತ್ತಾ ಮರೆಯಾಗಿ ಹೋದ. ●